4.	ತುಮಕೂರು–ಅರಸೀಕೆರೆ –ಶಿವಮೊಗ್ಗ–ಸಾಗರ–ಹೊನ್ನಾವರ– (ರಾಷ್ಟ್ರೀಯ ಹೆದ್ದಾರಿ 17ರಲ್ಲಿ ಸೇರುವಂತೆ)	332
5.	ಬೆಂಗಳೂರು–ಮೈಸೂರು– ಮಡಿಕೇರಿ–ಮಂಗಳೂರು (ರಾಷ್ಟ್ರೀಯ ಹೆದ್ದಾರಿ 17ರಲ್ಲಿ ಸೇರುವಂತೆ)	385
6.	ಬೆಳಗಾಂ –ಬಿಜಾಪುರ – ಗುಲ್ಬರ್ಗಾ–ಹುಮ್ನಾಬಾದ್ (ರಾಷ್ಟ್ರೀಯ ಹೆದ್ದಾರಿ 9ನ್ನು ಸೇರುವಂತೆ)	364
7.	ಬೆಳಗಾಂ–ಬಾಗಲ್‌ಕೋಟ್–ರಾಯಚೂರು– ಮೆಹಬೂಬ್‌ನಗರ (ಆಂಧ್ರಪ್ರದೇಶದಲ್ಲಿ)	336
8.	ಚಿತ್ರದುರ್ಗ– ಹೊಳಲ್ಕೆರೆ – ಹೊಸದುರ್ಗ–ಚಿಕ್ಕಮಗಳೂರು– ಮೂಡಿಗೆರೆ– ಬೆಳ್ತಂಗಡಿ– ಬಂಟ್ವಾಳ– ಮಂಗಳೂರು (ರಾಷ್ಟ್ರೀಯ ಹೆದ್ದಾರಿ 17ರಲ್ಲಿ ಸೇರುವಂತೆ)	283
9.	ಧಾರವಾಡ – ಲೋಂಡಾ–ಅನ್‌ಮೋದ್ – ಪಣಜಿ (ರಾಷ್ಟ್ರೀಯ ಹೆದ್ದಾರಿ 17ರಲ್ಲಿ ಸೇರುವಂತೆ)	95
10.	ಪಡುಬಿದ್ರಿ – ಕಾರ್ಕಳ–ಶೃಂಗೇರಿ–ತೀರ್ಥಹಳ್ಳಿ– ಶಿಕಾರಿಪುರ–ಶಿರಾಳ್‌ಕೊಪ್ಪ–ಹುಬ್ಬಳ್ಳಿ– ಬಾಗಲ್‌ಕೋಟ್– ಹುನಗುಂದ	550
11.	ಶಿರಾ– (ಬೆಂಗಳೂರು – ಪೂನಾ ರಾಷ್ಟ್ರೀಯ ಹೆದ್ದಾರಿ ನಂ.4) ಮಧುಗಿರಿ– ಗೌರಿಬಿದನೂರ್– ಚಿಕ್ಕಬಳ್ಳಾಪುರ– ಚಿಂತಾಮಣಿ– ಶ್ರೀನಿವಾಸಪುರ– ಮುಳಬಾಗಿಲು (ಬೆಂಗಳೂರು – ಮದ್ರಾಸ್ ರಾಷ್ಟ್ರೀಯ ಹೆದ್ದಾರಿ ನಂ.4)	160
12.	ಚಿತ್ರದುರ್ಗ– ಶಿವಮೊಗ್ಗ– ಸಕಲೇಶಪುರ– ಮಡಿಕೇರಿ ಹಾಗೂ ಕೇರಳದಲ್ಲಿರುವ ತಲ್ಲಿಚೇರಿ	325
13.	ಬೆಂಗಳೂರು– ಕನಕಪುರ– ಮಳವಳ್ಳಿ– ಮೈಸೂರು– ನಂಜನಗೂಡು– ಸುಲ್ತಾನ್‌ಬತ್ತೇರಿ ಹಾಗೂ ಕೇರಳದಲ್ಲಿರುವ ಕಲ್ಲಿಕೋಟೆ	250
	ಒಟ್ಟು ಉದ್ದ	4400 ಕಿ.ಮೀ.

ಹಿಡಕಲ್ ಅಣೆಕಟ್ಟಿನ ಉಪನಾಲೆಗಳು ಪೂರ್ಣಗೊಳ್ಳದಿರುವುದು

1218 (235): ಶ್ರೀ ಎಸ್.ಎಸ್. ಭೀಮಣ್ಣ **(ಚಿಕ್ಕೋಡಿ):**–

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾಂ ಜಿಲ್ಲೆಯಲ್ಲಿರುವ ಹಿಡಕಲ್ ಅಣೆಕಟ್ಟನ್ನು **ಕಟ್ಟಿ** 20 ವರ್ಷ **ಕಳೆದರೂ** ಅದರ ಉಪನಾಲೆಗಳು ಇನ್ನೂ ಪೂರ್ಣಗೊಂಡಿಲ್ಲದಿರುವುದು **ಸರ್ಕಾರದವರ** ಗಮನಕ್ಕೆ ಬಂದಿದೆಯೆ;

ಆ) ಬಂದಿದ್ದಲ್ಲಿ, ಈ ಉಪನಾಲೆಗಳ ನಿರ್ಮಾಣ **ಕಾರ್ಯಗಳನ್ನು** ಎಷ್ಟು **ಅವಧಿಯೊಳಗೆ** ಪೂರ್ಣಗೊಳಿಸಲಾಗುವುದು ?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು):–

ಅ) ಹೌದು.

ಆ) 2000ದ ಇಸವಿ ಒಳಗಡೆ ಈ ಉಪನಾಲೆಗಳ ನಿರ್ಮಾಣ ಕಾರ್ಯವನ್ನು ಎಲ್ಲಾ ರೀತಿಯಲ್ಲೂ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ರಾಣೆಬೆನ್ನೂರಿನಲ್ಲಿ ಸರ್ಕ್ಯೂಟ್

1219 (86): ಶ್ರೀ ಕೆ.ಬಿ. ಕೋಳಿವಾಡ (ರಾಣೆಬೆನ್ನೂರು):–

ಮಾನ್ಯ ಲೋಕೋಪಯೋಗಿ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಣೆಬೆನ್ನೂರಿನಲ್ಲಿ ಸರ್ಕ್ಯೂಟ್ ಹೌಸ್ ಕಟ್ಟುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) 1993–94ರ ಆಯವ್ಯಯದಲ್ಲಿ ಇದನ್ನು ಅಳವಡಿಸಿಕೊಳ್ಳಲಾಗುವುದೇ ?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) ಹೌದು.

ಆ) ಪರಿಶೀಲಿಸಲಾಗುವುದು.

ಬೀದರ್ ತಾಲ್ಲೂಕಿನಲ್ಲಿ ಕಳೆದ 3 ವರ್ಷಗಳಲ್ಲಿ ನಿರ್ಮಾಣವಾದ ಹೊಸಕೆರೆಗಳು

1220 (996): ಶ್ರೀ ಗುರುಪಾದಪ್ಪ ನಾಗ್ಮಾರ್‌ಪಳ್ಳಿ (ಬೀದರ್):–

ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ 3 ವರ್ಷಗಳಲ್ಲಿ ಬೀದರ್ ಜಿಲ್ಲೆಯ ಬೀದರ್ ತಾಲ್ಲೂಕಿನಲ್ಲಿ ಎಷ್ಟು ಹೊಸ ಕೆರೆಗಳಿಗೆ ಮಂಜೂರಾತಿ ನೀಡಲಾಗಿದೆ:

ಆ) ಅವುಗಳಲ್ಲಿ ಎಷ್ಟಕ್ಕೆ ಆಡಳಿತಾತ್ಮಕ ಮಂಜೂರಾತಿ ದೊರೆತಿದೆ ?

ಇ) ಆ ಪೈಕಿ ಎಷ್ಟು ಕೆರೆಗಳನ್ನು ಇದುವರೆವಿಗೆ ನಿರ್ಮಿಸಲಾಗಿದೆ ?

ಈ) ಇದಕ್ಕಾಗಿ ಖರ್ಚಾಗಿರುವ ಒಟ್ಟು ಹಣದ ಮೊತ್ತವೆಷ್ಟು (ವರ್ಷವಾರು ವಿವರಗಳನ್ನು ನೀಡುವುದು) ?

ಡಾ।। ಆರ್.ಬಿ. ಚೌಧುರಿ (ಸಣ್ಣ ನೀರಾವರಿ ರಾಜ್ಯ ಸಚಿವರು):–

ಅ) ಯಾವುವು ಇಲ್ಲ

ಆ) ಉದ್ಭವಿಸುವುದಿಲ್ಲ

ಇ) –"–

ಈ) –"–

ಬೀದರ್ ತಾಲ್ಲೂಕಿನಲ್ಲಿ ಬ್ರಿಡ್ಜ್ ಕಂ ಬ್ಯಾರೇಜ್

1221 (997): ಶ್ರೀ ಗುರುಪಾದಪ್ಪ ನಾಗ್ಮಾರ್‌ಪಳ್ಳಿ (ಬೀದರ್):–

ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?